**ದಿನಾಂಕ: 21-02-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಕೆ ಎಂ ಎನ್ 9 ನೇ ಪ್ರತಿವಾದಿ ಪರ ವಕೀಲರಿಂದ**

9. 9 ನೇ ಪ್ರತಿವಾದಿಯ ಪರವಾಗಿ ದಾವಾ ಅನುಸೂಚಿ ಸ್ವತ್ತಿನ ದಾಖಲೆಗಳು ವರ್ಗಾವಣೆಯಾದಾಗ ಸದರಿ ವರ್ಗಾವಣೆಯ ಕುರಿತು ನಾನು ಎ ಸಿ ನ್ಯಾಯಾಲಯಕ್ಕೆ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಮಾನ್ಯ ನ್ಯಾಯಾಲಯದ ಮುಂದೆ ದಾವೆಯನ್ನು ಸಲ್ಲಿಸಿರುತ್ತೇನೆ ಎಂದು ಉತ್ತರಿಸುತ್ತಾರೆ.

10. ಪ್ರಸ್ತುತ ದಾವೆಯನ್ನು 1 ರಿಂದ 9 ನೇ ಪ್ರತಿವಾದಿಯರ ವಿರುದ್ದ ದಾಖಲಿಸುವ ಕಾಲಕ್ಕೆ ದಾವಾ ಅನುಸೂಚಿ ಸ್ವತ್ತು ನನ್ನ ಅತ್ತೆ ಸೋಮಶೇಖರಮ್ಮರವರ ಹೆಸರಿನಲ್ಲಿತ್ತು. ನನ್ನ ಅತ್ತೆ ಸೋಮಶೇಖರಮ್ಮರವರು ಪ್ರಸ್ತುತವಾಗಿ ಜೀವಂತ ಇರುವುದಿಲ್ಲ. ಸದರಿಯವರು ಎಷ್ಟು ವರ್ಷಗಳ ಹಿಂದೆ ಮೃತರಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಅತ್ತೆ ಸೋಮಶೇಖರಮ್ಮರವರು ಮೃತರಾದ ನಂತರ ಸದರಿಯವರ ಹೆಸರಿನಲ್ಲಿದ್ದ ದಾವಾ ಅನುಸೂಚಿ ಸ್ವತ್ತು 9 ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆಯಾಗಿರುತ್ತದೆ. ದಾವಾ ಅನುಸೂಚಿ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇರದೆ ಇದ್ದರೂ ಮಾನ್ಯ ನ್ಯಾಯಾಲಯದ ಮುಂದೆ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. ತಹಶಿಲ್ದಾರವರಿಂದ ಪರಿಶೀಲನೆ ಮಾಡಿ ಮ್ಯೂಟೇಶನ್ ಬದಲಾವಣೆ ಮಾಡಿದ ನಂತರ ಖಾತೆ ಬದಲಾವಣೆಯಾದ ಖಾತೆದಾರರಿಂದ ದಾವಾ ಅನುಸೂಚಿ ಸ್ವತ್ತಿನ್ನು 9 ನೇ ಪ್ರತಿವಾದಿಯವರು ಖರೀದಿ ಮಾಡಿರುತ್ತಾರೆ ಎಂದರೆ ಸುಳ್ಳು. 1 ರಿಂದ 3, 5 ರಿಂದ 8 ನೇ ಪ್ರತಿವಾದಿಯವರು 9 ನೇ ಪ್ರತಿವಾದಿಗೆ ದಾವಾ ಅನುಸೂಚಿ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ. ದಾವಾ ಅನುಸೂಚಿ ಸ್ವತ್ತನ್ನು ಯಾರು ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಯಾವುದೇ ಮಾಹಿತಿ ಇರದೆ ಇದ್ದರೂ ಸುಳ್ಳು ಮಾಹಿತಿಯನ್ನು ಪಡೆದು ಮಾನ್ಯ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 9 ನೇ ಪ್ರತಿವಾದಿ ದಾವಾ ಅನುಸೂಚಿ ಸ್ವತ್ತಿನ ಹಕ್ಕುದಾರರಿಂದ ಸದರಿ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸುಳ್ಳು.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ  ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.